ಸರಬರಾಜಿಗೆ ಸಂಬಂಧಪಟ್ಟಂತೆ ಬೆಳಿಗ್ಗೆ ನಾನು ತಮ್ಮನ್ನು ಭೇಟಿ ಮಾಡಿ ಈ ಬಗ್ಗೆ ಪ್ರತ್ಯೇಕವಾಗಿ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳುವುದಕ್ಕೆ ಬಂದಿದ್ದೆ. ಅತ್ಯಂತ ಭೀಕರವಾದ ಪರಿಸ್ಥಿತಿ ಬೆಂಗಳೂರು ನಗರದಲ್ಲಿ ಇದೆ, ಮಾನ್ಯ ಮುಖ್ಯಮಂತ್ರಿಗಳು ಗಮನಿಸಿದ್ದಾರೆಯೇ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಕೇವಲ ಬೆಂಗಳೂರಿನಲ್ಲಿ ಮಾತ್ರವಲ್ಲದೇ ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನೀರು ಸರಬರಾಜು ಬಗ್ಗೆ ಸಮರೋಪಾದಿ ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಎಚ್.ಡಿ. ದೇವೇಗೌಡ : ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದರು, ಎಸ್.ಟಿ. ರಾಮರಾವ್‌ಗೆ ಪತ್ರ ಬರೆದು ಅವರಿಂದ ಉತ್ತರವನ್ನು ನಿರೀಕ್ಷಣೆ ಮಾಡುವುದಕ್ಕೆ ಹೋಗಿಲ್ಲ, ತುಂಗಭದ್ರ ಬಗ್ಗೆ ಬೇರೆ ಬೇರೆ ಯೋಜನೆ ಬಗ್ಗೆ ಹೇಳಬೇಕಾಗುತ್ತದೆ, ಮುಂದೆ ಬರುತ್ತೇನೆ. ಇದರಲ್ಲಿ ನೇರವಾಗಿ ಕೇಂದ್ರ ಸರ್ಕಾರದ ಹೊಣೆ ಇದೆ. ಕೇಂದ್ರ ಸರ್ಕಾರದ ಎನರ್ಜಿ ಮಿನಿಸ್ಟರ್ ಮತ್ತು ಕೇಂದ್ರ ಸರ್ಕಾರದ ಹೊಣೆ ಇದೆ. ಕೇಂದ್ರ ಸರ್ಕಾರದ ಎನರ್ಜಿ ಮಿನಿಸ್ಟರ್ ಮತ್ತು ಕೇಂದ್ರ ಸರ್ಕಾರ ಇದಕ್ಕೆ ಹೊಣೆ. ನಮ್ಮ ಪಾಲಿನ ವಿದ್ಯುತ್ ಸರಬರಾಜು ಆಗತಕ್ಕದ್ದಕ್ಕೆ ನೇರವಾಗಿ ಕೇಂದ್ರ ಸರ್ಕಾರ ತನ್ನ ಕರ್ತವ್ಯ ಮಾಡಬೇಕು. ನಾವು ಹೋಗಿ ಅವರನ್ನು ಭೇಟಿ ಮಾಡಿ ವಿಷಯವನ್ನು ಮನವರಿಕೆ ಮಾಡಿದ ಮೇಲೆ ಕೇಂದ್ರ ಸರ್ಕಾರದವರು ಒಂದು ಸೂಚನೆ ಕೊಟ್ಟಿದ್ದಾರೆ. ಒಬ್ಬ ಜಾಯಿಂಟ್ ಸೆಕ್ರೆಟರಿ ಶ್ರೀ ಅಬ್ರಹಾಮ್ ಎನ್ನುವವರಿಗೆ ಜವಾಬ್ದಾರಿಯನ್ನು ಕೊಟ್ಟು ಪ್ರತಿ ದಿವಸವೂ ನೀವು ಮಾನಿಟರ್ ಮಾಡಬೇಕು, ಎಷ್ಟು ಪವರ್ ಹೋಯಿತು, ಇದರಲ್ಲಿ ಯಾವುದೇ ಕಾರಣದಿಂದ ಆತಂಕ ಬರಕೂಡದು ಎಂದು ಹೇಳಿ ಅವರು ಸ್ಪೆಸಿಫಿಕ್ ಡೈರೆಕ್ಷನ್ ಕೊಟ್ಟು ಕೇಂದ್ರ ಸರ್ಕಾರ ಕೋಆಪರೇಟ್ ಮಾಡಿದ್ದಾರೆ. ಮುಂದೆ ನಿಮ್ಮ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. 31ನೇ ತಾರೀಖಿನೊಳಗೆ ನಮಗೆ ಬಂದಿದ್ದನ್ನು ಬೇರೆಯುವುದಕ್ಕೆ ಉಪಯೋಗಿಸಿಕೊಳ್ಳೋಣ ಮುಂದೆ ಬೆಂಗಳೂರಿಗೆ ಈ ತರಹ ಆತಂಕ ಬರದೇ ಇರತಕ್ಕ ಪರಿಸ್ಥಿತಿ ನೋಡಿಕೊಳ್ಳುವುದಕ್ಕೆ ಅಗತ್ಯವಾದ ಕ್ರಮ ತೆಗೆದುಕೊಳ್ಳುತ್ತೇವೆ, ಮಾರ್ಚ್ 31ರೊಳಗೆ.

ಮುಖ್ಯ ಮಂತ್ರಿಗಳ ವಿದೇಶ ಪ್ರವಾಸ

332 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮುಖ್ಯಮಂತ್ರಿಗಳು ವಿದೇಶದಲ್ಲಿನ ಯಾವ ಯಾವ ನಗರಗಳಿಗೆ ಎಂದು ಭೇಟಿ ಕೊಟ್ಟಿರುತ್ತಾರೆ?*

ಆ) *ಈ ಪ್ರವಾಸಕ್ಕೆ ತಗುಲಿದ ವೆಚ್ಚ ಎಷ್ಟು?*

ಇ) *ಪ್ರವಾಸ ಕಾಲದಲ್ಲಿ ರಾಜ್ಯಕ್ಕೆ ಸಂಬಂಧಿಸಿದಂತೆ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳೇನು ಹಾಗೂ ಅದರ ಪ್ರಗತಿ ಯಾವ ಹಂತದಲ್ಲಿದೆ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು)

ಅ) ಮುಖ್ಯ ಮಂತ್ರಿಯವರು ಸ್ವಿಡ್ಜರ್ಲೆಂಡ್‌ನ ಡಾವೋಸ್‌ಗೆ ವರ್ಲ್ಡ್ ಎಕನಾಮಿಕ್ಸ್ ಫೋರಂನ ವಾರ್ಷಿಕ ಸಭೆಯಲ್ಲಿ ಭಾಗವಹಿಸಲು ದಿನಾಂಕ 22 ರಿಂದ 31ನೇ ಜನವರಿ

1995 ರವರೆಗೂ ಹಾಗೂ ಇಸ್ರೇಲ್ ದೇಶದ ಟೆಲ್‌ಅವೀವ್‌ಗೆ 1 ರಿಂದ 5ನೇ ಫೆಬ್ರವರಿ 95 ರವರೆಗೂ ಒಟ್ಟು 10 ದಿನಗಳು ಭೇಟಿ ನೀಡಿರುತ್ತಾರೆ

ಅ) ಈ ಪ್ರವಾಸಕ್ಕೆ ತಗಲಿದ ವೆಚ್ಚ ಒಟ್ಟು ರೂ. 1,05,500-00 ಗಳು ಆಗಿರುತ್ತದೆ.

ಇ) 1. ರಾಜ್ಯಕ್ಕೆ ಸಂಬಂಧಿಸಿದಂತೆ ಪ್ರವಾಸ ಕಾಲದಲ್ಲಿ ಕೈಗೊಂಡ ಕಾರ್ಯಕ್ರಮಗಳು ಈ ಕೆಳಗಿನಂತೆ ಇರುತ್ತವೆ:

1) ಕಾರು ಉತ್ಪನ್ನ ಯೋಜನೆಯನ್ನು ರಾಜ್ಯದಲ್ಲಿ ಸ್ಥಾಪಿಸುವ ಬಗ್ಗೆ ವೋಕ್ಸ್ ವಾಗನ್ ಮತ್ತು ಐಷರ್ ಕಂಪನಿಗಳ ಮುಖ್ಯಸ್ಥರೊಂದಿಗೆ ಚರ್ಚೆ;
2) ರಾಜ್ಯದಲ್ಲಿ ಉದ್ಯಮಗಳನ್ನು ಸ್ಥಾಪಿಸುವ ಬಗ್ಗೆ ಶ್ರೀ ರಾಹುಲ್ ಬಜಾಜ್, ಶ್ರೀ ಜಮ್‌ಷಡ್ಜಿ ಗೋದ್ರೇಜ್ ಮತ್ತು ಇತರ ಪ್ರಮುಖ ಉದ್ಯಮಿದಾರರೊಂದಿಗೆ ಚರ್ಚೆ
3) ಬ್ರಿಟಿಷ್ ಸ್ಟೀಲ್ ಕಾರ್ಪೊರೇಷನ್ ಹಾಗೂ ಇತರ 20 ಅಂತರ ರಾಷ್ಟ್ರೀಯ ಉದ್ಯಮ ಸಂಸ್ಥೆಗಳೊಂದಿಗೆ ರಾಜ್ಯದಲ್ಲಿ ಉದ್ಯಮ ಸ್ಥಾಪಿಸುವ ಬಗ್ಗೆ ಚರ್ಚೆ
4) ಪ್ರಾದೇಶಿಕ ಆರ್ಥಿಕ ಪ್ರಗತಿಯ ಬಗ್ಗೆ 40ಅಂತರ ರಾಷ್ಟ್ರೀಯ ಮುಖಂಡರೊಂದಿಗೆ ಚರ್ಚೆ.
5) ಯೂನಿಲಿವರ್ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮೈಖೇಲ್ ಪೆರ್ರಿ ಅವರೊಂದಿಗೆ ಅಗ್ರೊ ಬೇಸ್ಡ್ ಉದ್ಯಮಗಳ ಬಗ್ಗೆ ಚರ್ಚೆ
6) ಸೈಮನ್ಸ್ ಕಂಪನಿ ಮುಖ್ಯಸ್ಥ ಶ್ರೀ ಫ್ರಾನ್ಸ್ ಹರ್ಮನ್ ಅವರೊಂದಿಗೆ ವಿದ್ಯುತ್ ಉತ್ಪನ್ನ ಇತ್ಯಾದಿ ವಿಷಯಗಳ ಬಗ್ಗೆ ಚರ್ಚೆ
7) ಸುಲ್ಜರ್ ಕಂಪನಿ ಮುಖ್ಯಸ್ಥ ಶ್ರೀ ಫ್ರಿಟ್‌ಜ ಫಾಹ್ನಿ ಅವರೊಂದಿಗೆ ನೇಯ್ಗೆ ಉದ್ಯಮದ ಯಂತ್ರಗಳ ಉತ್ಪನ್ನದ ಬಗ್ಗೆ ಚರ್ಚೆ
8) ಟಾಟಾ ಕಂಪನಿಯ ಅಧ್ಯಕ್ಷರಾದ ಶ್ರೀ ಥಾಮಸ್ ಜೆ.ಟಾಟಾ ಅವರೊಂದಿಗೆ ಬೆಂಗಳೂರಿನಲ್ಲಿ ಚರ್ಮ ಉದ್ಯಮ ತರಬೇತಿ ಕೇಂದ್ರ ಸ್ಥಾಪನೆ ಇತ್ಯಾದಿ ಬಗ್ಗೆ ಚರ್ಚೆ
9) ಬೆಚ್ಟಲ್ ಸಂಸ್ಥೆಯ ಮುಖ್ಯಸ್ಥ ಶ್ರೀ ಡಾನ್ ಜೆ. ಗುಂಥರ್ ಅವರೊಂದಿಗೆ ವಿನ್ಯಾಸ ಹಾಗೂ ನಿರ್ಮಾಣ ಘಟಕವನ್ನು ಬೆಂಗಳೂರಿನಲ್ಲಿ ಸ್ಥಾಪಿಸುವ ಬಗ್ಗೆ ಚರ್ಚೆ
10) ಡು ಪಂಟ್ ಡೇ ನೇಮರಸ್ ಇಂಟರ್ ನ್ಯಾಷನಲ್ ಸಂಸ್ಥೆಯು ಧಾಪರ್ ಗ್ರೂಪ್‌ನೊಂದಿಗೆ ನೈಲಾನ್ ಹುರಿಯನ್ನು ಮಾಡುವ ಉದ್ಯಮ ಸ್ಥಾಪಿಸುವ ಬಗ್ಗೆ ಚರ್ಚೆ
11) ಸವಾಯ್ ಕ್ಯಾಪಿಟಲ್ ಸಂಸ್ಥೆಯ ಮುಖ್ಯಸ್ಥ ಶ್ರೀ ಫ್ರಾನ್ಸಿಸ್ಕೊ ಎ. ಲಾರೆಜೋ ಅವರೊಂದಿಗೆ ಏರ್ ಟ್ಯಾಕ್ಸಿ – ಉದ್ಯಮದ ಬಗ್ಗೆ ಚರ್ಚೆ
12) ಎಬಿಬಿ ಸಂಸ್ಥೆಯ ಮುಖ್ಯಸ್ಥರೊಂದಿಗೆ ಹೈದರಾಬಾದ್‌ನಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಉತ್ಪನ್ನ ಘಟಕವನ್ನು ಸ್ಥಾಪಿಸುವ ಬಗ್ಗೆ ಚರ್ಚೆ
13) ಜಗಜೆತ್ ಇಂಡಸ್ಟ್ರೀಸ್‌ನ ಅಧ್ಯಕ್ಷರೊಂದಿಗೆ ಸದರಿ ಉದ್ಯಮದ ಘಟಕವನ್ನು ಕರ್ನಾಟಕದಲ್ಲಿ ಸ್ಥಾಪಿಸುವ ಬಗ್ಗೆ ಚರ್ಚೆ
14) ಇಸ್ರೇಲ್‌ನ ಉಪ-ಪ್ರಧಾನಿಯವರೊಂದಿಗೆ ಕೃಷಿ ಹೂವಿನ ಬೆಳೆ, ಟಿಸ್ಯೂ ಕಲ್ಚರ್, ಗ್ರೀನ್ ಹೌಸ್ ಕಲ್ಟಿವೇಷನ್ ಇತ್ಯಾದಿಗಳಲ್ಲಿ ಸಹಭಾಗಿತ್ವದ ಬಗ್ಗೆ ಚರ್ಚೆ

15) ಇಸ್ರೇಲ್‌ನ ಕೃಷಿ ಸಚಿವರೊಂದಿಗೆ ಕೃಷಿಗೆ ಸಂಬಂಧಪಟ್ಟ ವಿಷಯಗಳ ಸಹ ಭಾಗಿತ್ವದ ಬಗ್ಗೆ ಚರ್ಚೆ

16) ಇಸ್ರೇಲ್ ಸರ್ಕಾರದ ಸಂಸ್ಥೆಯಾದ 'ತಹಾಲ್ ಕನ್ಸಲ್ಟೆಂಟಿಂಗ್ ಇಂಜಿನಿಯರ್ಸ್' ಅವರೊಂದಿಗೆ ಜಲಸಂಪನ್ಮೂಲ ಅಭಿವೃದ್ಧಿ ಇತ್ಯಾದಿಗಳ ಬಗ್ಗೆ ಒಡಂಬಡಿಕೆ ಸಹಿ.

17) ಎ.ಎಂ. ಇಂಟರ್ ನ್ಯಾಷನಲ್ ಸಂಸ್ಥೆಯೊಂದಿಗೆ ಕೃಷಿ ಸಂಶೋಧನೆ ಇತ್ಯಾದಿಗಳ ಬಗ್ಗೆ ಒಡಂಬಡಿಕೆ ಸಹಿ.

18) ಸಯಾಗ್ ನರ್ಸರಿ ಎನ್ನುವ ಸಂಸ್ಥೆಯೊಂದಿಗೆ ಹೂವಿನ ಬೆಳೆ ಹಾಗೂ ಇತ್ಯಾದಿ ಬಗ್ಗೆ ಒಡಂಬಡಿಕೆ ಸಹಿ.

19) ಇಸ್ರೇಲ್ ಸಂಸ್ಥೆಯಾದ ಒಸ್ಟಾಟ್ ಎನ್ನುವ ಸಂಸ್ಥೆಯೊಂದಿಗೆ ಕೃಷಿ ಉತ್ಪನ್ನಗಳ ಬಗ್ಗೆ ಒಡಂಬಡಿಕೆ ಸಹಿ.

2. ಪ್ರಗತಿ ಈ ಕೆಳಗಿನಂತಿದೆ;

ಡಾವೋಸ್ ಮತ್ತು ಇಸ್ರೇಲ್‌ಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಡಿದ ಚರ್ಚೆ ಹಾಗೂ ಒಡಂಬಡಿಕೆಗಳ ಫಲವಾಗಿ ಈ ಕೆಳಗೆ ವಿವರಿಸಿರುವ ಕೈಗಾರಿಕೋದ್ಯಮಿಗಳು ಬೆಂಗಳೂರಿಗೆ ಭೇಟಿ ನೀಡಿರುತ್ತಾರೆ.

1) ಟಾಟಾ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಥಾಮಸ್ ಜೆ. ಟಾಟಾರವರು ದಿನಾಂಕ 13.2.1995 ರಂದು.

2) ಐಚರ್ ಗ್ರೂಪ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬದ್ರಿ ಅಗರ್‌ವಾಲ್ ಅವರು ಬೆಂಗಳೂರು ಹಾಗೂ ನೆಲಮಂಗಲಗಳಿಗೆ ಕಾರು ಉತ್ಪಾದನಾ ಕಾರ್ಖಾನೆಯ ಸ್ಥಳ ಆಯ್ಕೆ ಮಾಡಲು ಭೇಟಿ ನೀಡಿರುತ್ತಾರೆ.

3) ಎಲ್.ಎಂ. ಥಾಪರ್ ಗ್ರೂಪ್ ಸಂಸ್ಥೆಯ ಅಧಿಕಾರಿಗಳು ಬೆಂಗಳೂರಿಗೆ ಭೇಟಿ ನೀಡಿ ಕರ್ನಾಟಕದಲ್ಲಿ ಹಣ ತೊಡಗಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿರುತ್ತಾರೆ.

4) ರೇಥಿಯನ್ ಸಂಸ್ಥೆಯ ಅಧಿಕಾರಿಗಳು ಯು.ಎಸ್.ಎ.ನ ಮಸ್ಸಾಚುಸೆಟ್ಟ್ಸ್, ರಾಜ್ಯದ ರಾಜ್ಯಪಾಲಾರೊಂದಿಗೆ ಬೆಂಗಳೂರಿಗೆ ವಿಮಾನ ನಿಲ್ದಾಣ ಯೋಜನೆಯ ಬಗ್ಗೆ ಬೆಂಗಳೂರಿಗೆ ಭೇಟಿ ನೀಡಿರುತ್ತಾರೆ.

5) ಇಸ್ರೇಲ್ ದೇಶದ ತಹಾರ್ ಕನ್ಸಲ್ಟಿಂಗ್ ಇಂಜಿನಿಯರ್ಸ್ ಜಿಜ್‌ಕಾಟ್ ಅಗ್ರೊ ಡೆವಲಪ್‌ಮೆಂಟ್ ಅಂಡ್ ಕನ್ಸಲ್ಟೆನ್ಸಿ ಎ.ಎಂ. ಇಂಟರ್ ನ್ಯಾಷನಲ್ ಮತ್ತು ಸಾಯಾಗ್ ನರ್ಸರೀಸ್ ಪ್ರತಿನಿಧಿಗಳು ಬೆಂಗಳೂರಿಗೆ ಈಗಾಗಲೇ ಭೇಟಿ ನೀಡಿರುತ್ತಾರೆ ಮತ್ತು ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ 'ಕ್ರಿಯ ಯೋಜನೆ' ಯನ್ನು ತಯಾರಿಸಿರುತ್ತಾರೆ.

6) ಅಂತರರಾಷ್ಟ್ರೀಯ ಸಂಸ್ಥೆಗಳಾದ ಬೆಟ್‌ಚೆಲ್, ವೆಸ್ಟಿಂಗ್ ಹೌಸ್ ಎಲೆಕ್ಟ್ರಿಕ್, ಜನರಲ್ ಎಲೆಕ್ಟ್ರಿಕ್, ಇಟಾಚಿ ಕಾರ್ಪೊರೇಷನ್, ಬ್ರೋಕನ್ ಹಿಲ್ ಪ್ರಾಪರ್ಟಿ ಇತ್ಯಾದಿ ಸಂಸ್ಥೆಗಳಿಂದ ಯೋಜನೆಗಳ ಬಗ್ಗೆ ಪತ್ರಗಳು ಬಂದಿರುತ್ತದೆ. ಅಲ್ಲದೆ ಈ ಸಂಸ್ಥೆಗಳ ಪ್ರತಿನಿಧಿಗಳು ಸನಿಹದಲ್ಲಿಯೇ ಭೇಟಿ ನೀಡುವ ಸಾಧ್ಯತೆ ಇರುತ್ತದೆ.

12.10 ಪಿ.ಎಂ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಯವರು ಸ್ವಿಡ್ಜರ್ಲೆಂಡ್‌ನ ಡಾವೋಸ್‌ಗೆ ವರ್ಲ್ಡ್ ಎಕನಾಮಿಸಟ್ಸ್ ಫೋರಂನ ವಾರ್ಷಿಕ ಸಭೆಯಲ್ಲಿ

ಭಾಗವಹಿಸಲು ದಿನಾಂಕ 27 ರಿಂದ 31ನೇ ಜನವರಿ 1995 ರವರೆವಿಗೂ ಹಾಗೂ ಇಸ್ರೇಲ್ ದೇಶದ ಟೆಲ್ ಅವೀವ್‌ಗೆ 1 ರಿಂದ 5ನೇ ಫೆಬ್ರುವರಿ, 95 ರವರೆವಿಗೂ ಒಟ್ಟು 10 ದಿನಗಳು ಭೇಟಿ ನೀಡಿರುತ್ತಾರೆ. ಸದರಿ ಪ್ರವಾಸಕ್ಕೆ ತಗುಲಿದ ವೆಚ್ಚ ಒಟ್ಟು ರೂ. 1,05,500.00 ಗಳಾಗಿರುತ್ತದೆ. ರಾಜ್ಯಕ್ಕೆ ಸಂಬಂಧಿಸಿದಂತೆ ಪ್ರವಾಸ ಕಾಲದಲ್ಲಿ ಕೈಗೊಂಡ ಕಾರ್ಯಕ್ರಮಗಳು ಕುರಿತು ಹೇಳಬೇಕೆಂದರೆ, ಸುಮಾರು 20 ಕಂಪನಿಗಳ ಜೊತೆ ಮಾತುಕತೆ ನಡೆಸಿದ್ದು, ಈ ದಿಸೆಯಲ್ಲಿ ನಮ್ಮ ರಾಜ್ಯದಲ್ಲಿ ಬಂಡವಾಳ ಹೂಡುವುದಕ್ಕೆ ಉದ್ಯಮಿಗಳು ಮುಂದೆ ಬಂದಿದ್ದಾರೆಂದು ತಿಳಿಸಬಯಸುತ್ತೇನೆ. ಇದಾದ ನಂತರ ಇಸ್ರೇಲ್‌ನಲ್ಲಿ, ಅಲ್ಲಿನವರೊಂದಿಗೆ ವ್ಯವಸಾಯಕ್ಕೆ ಮತ್ತು ನೀರಾವರಿ ಬಳಕೆಗೆ ಸಂಬಂಧಿಸಿದಂತೆ ಚರ್ಚಿಸಿದಾಗ ಕೆಲವು ಕಂಪನಿಗಳವರು ಮುಂದು ಬಂದು ತಾಂತ್ರಿಕ ಸಲಹೆಗಳನ್ನು ನೀಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಮಂಜುನಾಥ ಸಿ. ಕುನ್ನೂರು : ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದಂತೆ ಅವರು ಸುಮಾರು 10 ದಿವಸಗಳ ಕಾಲ ವಿದೇಶ ಪ್ರವಾಸ ಕೈಗೊಂಡಿರುವುದಾಗಿ ತಿಳಿಸಿದ್ದು, ಇದಕ್ಕೆ ಒಟ್ಟು 1,05,500.00 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಜೊತೆಗೆ 20 ಕಂಪನಿಗಳ ಜೊತೆ ಮಾತುಕತೆ ನಡೆಸಿ ಬಂದಿದ್ದಾರೆ. ಇವರ ವಿದೇಶ ಪ್ರವಾಸಕ್ಕಾಗಿ ಖರ್ಚು ಮಾಡಿದ ಹಣ ಗಮನಿಸಿದರೆ ತುಂಬಾ ಕಡಿಮೆಯೆನಿಸುತ್ತದೆ ಮತ್ತು 20 ಕಂಪನಿಗಳ ಜೊತೆ ಚರ್ಚಿಸಿದ್ದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಆ ಚರ್ಚೆಗಳು ಚರ್ಚೆ ರೂಪದಲ್ಲಿ ಉಳಿಯದೆ ಕಾರ್ಯರೂಪಕ್ಕೆ ಬರಬೇಕೆಂದು ನಮ್ಮ ಬಯಕೆಯಾಗಿದೆ. 1987ರಲ್ಲಿ ಧಾರವಾಡ ಜಿಲ್ಲೆಯಲ್ಲಿನ ಕ್ಯಾಂಪ್ಕೊ ಸಂಸ್ಥೆಗೆ 1,700 ಎಕರೆಯಷ್ಟು ಜಮೀನನ್ನು ಖರೀದಿ ಮಾಡಿದರು....

ಅಧ್ಯಕ್ಷರು : ನಿಮ್ಮ ಅಭಿಪ್ರಾಯವೇನೆಂದು ಗೊತ್ತಾಗಿದೆ, ಇದರ ಬಗ್ಗೆ ವಿವರಣೆ ಬೇಡ.

ಶ್ರೀ ಮಂಜುನಾಥ ಸಿ. ಕುನ್ನೂರು : ಮುಖ್ಯಮಂತ್ರಿಗಳು ಲೋಕಸಭೆಯಲ್ಲಿ ಡಂಕೆಲ್ ಪ್ರಸ್ತಾವನೆಯನ್ನು ವಿರೋಧಿಸತಕ್ಕಂಥ....

ಅಧ್ಯಕ್ಷರು : ಪ್ರಪಂಚದಲ್ಲಿರುವ ಎಲ್ಲಾ ವಿಷಯವನ್ನು ಒಂದೇ ಪ್ರಶ್ನೆಯಲ್ಲಿ ಕೇಳಬೇಕೆಂದರೆ ಸಾಧ್ಯವಾಗಾತ್ತದೆಯೇ? ತಾವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಡಂಕೆಲ್ ಪ್ರಸ್ತಾವನೆಯನ್ನು ವಿರೋಧ ಮಾಡತಕ್ಕಂಥಾದ್ದು ಮತ್ತು ವಿದೇಶಿ ತೊಡಗಿಸತಕ್ಕಂಥಾದ್ದರ ಬಗ್ಗೆ ಮಾನ್ಯ ಸದಸ್ಯರು ಸಂದರ್ಭಾನುಸಾರ ಕೇಳುತ್ತಿದ್ದಾರೆ. ಇದರ ಬಗ್ಗೆ ಈಗ ಮುಖ್ಯಮಂತ್ರಿಗಳ ಮನಸ್ಸು, ಹೃದಯವೇನಾದರೂ ಪರಿವರ್ತನೆಯಾಗಿದೆಯೇ? ಆ ವಿಚಾರದಲ್ಲೇನಾದರೂ ಬದಲಾವಣೆಯಾಗಿದೆಯೇ? ಬದಲಾವಣೆಯಾಗಿದ್ದರೆ ಅದಕ್ಕೆ ಕಾರಣವೇನು? ಎಂಬುದರ ಬಗ್ಗೆ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೆ, ಈಗ ಡಂಕೆಲ್ ಪ್ರಸ್ತಾವನೆ ಪಾರ್ಲಿಮೆಂಟ್ ಮುಂದೆ ಬಂದಿರುವುದು ನಿಜ. ಸದರಿ ಪ್ರಸ್ತಾವನೆಯ ಸಾಧಕ-ಭಾಧಕಗಳನ್ನು ಸಂಪೂರ್ಣವಾಗಿ, ಸಮಗ್ರವಾಗಿ ಪರಿಶೀಲಿಸುವುದಕ್ಕೋಸ್ಕರ ಪಾರ್ಲಿಮೆಂಟಿನ ಒಂದು ಸಮಿತಿಯನ್ನು ರಚಿಸಲಾಗಿದ್ದು, ಆ ಸಮಿತಿಗೆ ನಾನೂ ಕೂಡ ಒಬ್ಬ ಸದಸ್ಯನಾಗಿದ್ದೇನೆ. ಅದು Parliamentary Standing Committee on Commerce.

ಆ ಸಮಿತಿಯವರು ಸರ್ವಾನುಮತದಿಂದ ಒಂದು ವರದಿ ಕೊಟ್ಟಿದ್ದು, ಆ ವರದಿಗೆ ನಾನು ರುಜು ಮಾಡಿದ್ದೇನೆ. ಆ ಸಮಿತಿಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರೂ ಇದ್ದಾರೆ. ವರದಿಯಲ್ಲಿ ನಾವು ಹೇಳಿರುವುದೇನೆಂದರೆ, ಕೇಂದ್ರ ಸರ್ಕಾರ

ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಈ ರಾಷ್ಟ್ರದ ಕೃಷಿಗೆ ಮತ್ತು ಈ ರಾಷ್ಟ್ರದಲ್ಲಿ ಬಡವರಿಗೆ ಒದಗಿಸತಕ್ಕಂಥ ಕೆಲವು ಆಹಾರ ಪದಾರ್ಥಗಳಿರಬಹುದು, ಇಂತಹ ವಿಷಯದಲ್ಲಿ ಸಬ್ಸಿಡಿ ಕಾಪೊನೆಂಟ್ ಕೊಡುವಾಗ ಇವೊತ್ತು ಬಹಳ ಎಚ್ಚರಿಕೆ ವಹಿಸಿ ಪಾರ್ಲಿಮೆಂಟ್‌ನಲ್ಲಿ ನಿರ್ಣಯ ಮಾಡಬೇಕೆಂದು ಹೇಳಿದ್ದೇವೆ. ಅಷ್ಟೇ ಅಲ್ಲ, ಇವೊತ್ತು ಸೋಶಿಯಲ್ ಸೆಕ್ಟಾರ್ ಇರಬಹುದು, ಟೆಕ್ಸ್‌ಟೈಲ್ ಇರಬಹುದು, ಪ್ರತಿಯೊಂದರ ಬಗ್ಗೆಯೂ ಸವಿಸ್ತಾರವಾಗಿ ನಮ್ಮ ದೇಶದ ಪ್ರಗತಿಗೆ ಆತಂಕ ಬರಬಾರದೆಂದು ನಾವು ಸಲಹೆಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ಯಾವುದೇ ರೀತಿಯ ಬದಲಾವಣೆ ಇಲ್ಲ. ಇನ್ನು ವಿದೇಶಿ ಬಂಡವಾಳ ಬರತಕ್ಕಂಥಾದ್ದರ ಬಗ್ಗೆ ಕೆಲವು ಸೆಕ್ಟಾರ್‌ಗಳಲ್ಲಿ ಬಳಕೆ ಮಾಡಿಕೊಳ್ಳುವುದಕ್ಕೆ ನಮ್ಮ ವಿರೋಧವೇನೂ ಇಲ್ಲವೆಂದು ಸ್ಪಷ್ಟಪಡಿಸಬಯಸುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ತಾವು ಇಸ್ರೇಲ್ ದೇಶಕ್ಕೆ ಭೇಟಿ ಕೊಟ್ಟು ಬಂದಿರುವ ಹಿನ್ನೆಲೆಯಲ್ಲಿ ರಾಜ್ಯದ ಕೃಷಿ ವಲಯಕ್ಕೇನಾದರೂ ನಿಶ್ಚಿತವಾದ ಲಾಭವಾಗಿದೆಯೇ?

ಶ್ರೀ ಹೆಚ್.ಡಿ. ದೇವೇಗೌಡ : ಇದರ ಬಗ್ಗೆ ಸವಿಸ್ತಾರವಾಗಿ ಹೇಳುವುದಕ್ಕೆ ಸಮಯದ ಅಭಾವವಿರುವುದರಿಂದ, ನಂತರ ತಿಳಿಸುತ್ತೇನೆ.

ನಗರದ ವಿದ್ಯುತ್ ಚಿತಾಗಾರಗಳಿಂದ ಸಾರ್ವಜನಿಕರಿಗೆ ಉಂಟಾಗಿರುವ ಮಾಲಿನ್ಯದ ಸಮಸ್ಯೆ

243 - ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ವಿದ್ಯುತ್ ಚಿತಾಗಾರಗಳಿಂದ ಸುತ್ತಮುತ್ತಲಿನ ನಿವಾಸಿಗಳು ಸಂಕಷ್ಟಕ್ಕೆ ಈಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಚಿತಾಗಾರಗಳನ್ನು ಬೆಂಗಳೂರಿನ ಹೊರವಲಯಕ್ಕೆ ವರ್ಗಾಯಿಸುವುದರ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ?

ಇ) ಚಿತಾಗಾರದಿಂದ ಹೊರಬರುತ್ತಿರುವ ಹೊಗೆ, ವಾಸನೆ, ಇತ್ಯಾದಿಗಳನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಬೆಂಗಳೂರಿನಲ್ಲಿ 5 ಚಿತಾಗಾರಗಳಿವೆ. ದೂರುಗಳು ಬಂದಾಗ್ಗೆ ತಕ್ಕ ಪ್ರಾಧಿಕಾರವು ತೊಂದರೆಯಾಗದಂತೆ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು.

ಆ) ಹೌದು. ಅವಶ್ಯಕತೆ ಕಂಡು ಬಂದಲ್ಲಿ.

ಇ) ವಿದ್ಯುತ್ ಚಿತಾಗಾರಗಳ ಹೊಗೆಕೊಳವೆಗಳ ಎತ್ತರವನ್ನು ಹೆಚ್ಚಿಸುವುದು ಸಾಂಪ್ರದಾಯಿಕ ಪದ್ಧತಿಯಾಗಿದ್ದು ಅದನ್ನು ಪ್ರಯತ್ನಿಸಲಾಗಿದೆ. ಇದೂ ಅಲ್ಲದೆ ವಿದ್ಯುತ್ ಚಿತಾಗಾರಗಳಿಂದ ಹೊರಸೂಸುವ ವಾಸನೆಯನ್ನು ನಿವಾರಿಸಲು ಆಯಿಲ್ ಫಿಲ್ಟರ್‌ಗಳನ್ನು ಪ್ರಯೋಗಿಕವಾಗಿ ಅಳವಡಿಸಲಾಗಿದೆ. ಈ ಪದ್ಧತಿಯು ಯಶಸ್ವಿಯಾದರೆ ಇದನ್ನು ಎಲ್ಲಾ ವಿದ್ಯುತ್ ಚಿತಾಗಾರಗೆಳಲ್ಲಿಯೂ ಅಳವಡಿಸಲಾಗುವುದು.

ಡಾ|| ಜೀವರಾಜ್ ಆಳ್ವ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ It is an officiaal document. There is a basic failure on the part of the Government. Without seeing it, you apporve. This is a tragic state.'ಹೌದು' ಅವಶ್ಯಕತೆ ಕಂಡು ಬಂದಲ್ಲಿ ಮತ್ತು 'ಸ್ವಾಮಿ' ಇಂತಹ ಉತ್ತರಗಳನ್ನು ಸರ್ಕಾರಿ ಕಾರ್ಯಕಲಾಪಗಳಲ್ಲಿ ಕೊಟ್ಟರೆ ಅಷ್ಟು ಸರಿಯಾಗಿರುವುದಿಲ್ಲ. ಇದನ್ನು ಸರಿಪಡಿಸಬೇಕು.